ರಾಜ್ಯದಲ್ಲಿ ಸ್ಥಗಿತಗೊಂಡಿರುವ ಸಹಕಾರಿ ಸಂಘಗಳು

295 (296) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ರಾಜ್ಯದಲ್ಲಿ ಸ್ಥಗಿತಗೊಂಡಿರುವ ಎಷ್ಟು ಸಹಕಾರಿ ಸಂಘಗಳನ್ನು ಸಮಾಪನೆಗೊಳಿಸಲು ಸರ್ಕಾರ ಅನುಮತಿ ನೀಡಿದೆ ; (ಜಿಲ್ಲಾವಾರು ವಿವರ ನೀಡುವುದು) ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು):

ರಾಜ್ಯದಲ್ಲಿ 2009–10ನೇ ಸಾಲಿನ ಅಂತ್ಯಕ್ಕೆ 2817 ಸ್ಥಗಿತಗೊಂಡ ಸಹಕಾರ ಸಂಘಗಳಿರುತ್ತವೆ. ಸರ್ಕಾರದಿಂದ ಯಾವುದೇ ಸಹಕಾರಿ ಸಂಘವನ್ನು ಸಮಾಪನಗೊಳಿಸಲು ಅನುಮತಿ ನೀಡಿರುವುದಿಲ್ಲ. ಸಹಕಾರ ಸಂಘಗಳನ್ನು ಸಮಾಪನೆಗೊಳಿಸಲು ಸಕ್ಷಮ ಪ್ರಾಧಿಕಾರಿಗಳು ಕ್ರಮ ಕೈಗೊಂಡಿರುತ್ತಾರೆ. ಈ ಪೈಕಿ 1519 ಸಂಘಗಳು ಸಮಾಪನೆಗೊಂಡಿದ್ದು ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ಕೆ. ವಸಂತ ಬಂಗೇರ ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 296ರ ಅನುಬಂಧ

ಕ್ರ ಸಂ.	ಜಿಲ್ಲೆಯ ಹೆಸರು	ಸ್ಥಗಿತಗೊಂಡ ಸಹಕಾರ ಸಂಘಗಳು	ಸಮಾಪನೆಗೊಂಡ ಸಹಕಾರ ಸಂಘಗಳು
1	ಬೆಂಗಳೂರು ನಗರ ಜಿಲ್ಲೆ	335	195
2	ಬೆಂಗಳೂರು ಗ್ರಾಮಾಂತರ ಜಿಲ್ಲೆ	44	30
3	ರಾಮನಗರ	76	69
4	ತುಮಕೂರು	174	59

ಕ್ರ ಸಂ.	ಜಿಲ್ಲೆಯ ಹೆಸರು	ಸ್ಥಗಿತಗೊಂಡ ಸಹಕಾರ ಸಂಘಗಳು	ಸಮಾಪನೆಗೊಂಡ ಸಹಕಾರ ಸಂಘಗಳು
5	ಕೋಲಾರ	128	87
6	ಚಿಕ್ಕಬಳ್ಳಾಪುರ	72	54
7	ಚಿತ್ರದುರ್ಗ	140	46
8	ದಾವಣಗೆರೆ	109	100
9	ಶಿವಮೊಗ್ಗ	73	64
10	ಮೈಸೂರು	25	15
11	ಚಾಮರಾಜನಗರ	20	23
12	ಮಂಡ್ಯ	19	9
13	ಹಾಸನ	43	38
14	ಚಿಕ್ಕಮಗಳೂರು	18	15
15	ಕೊಡಗು	11	10
16	ದಕ್ಷಿಣ ಕನ್ನಡ	34	11
17	ಉಡುಪಿ	15	13
18	ಬೆಳಗಾಂ	162	152
19	ವಿಜಾಪುರ	57	3
20	ಬಾಗಲಕೋಟೆ	159	101
21	ಧಾರವಾಡ	42	–
22	ಗದಗ	26	3

ಕ್ರ. ಸಂ.	ಜಿಲ್ಲೆಯ ಹೆಸರು	ಸ್ಥಗಿತಗೊಂಡ ಸಹಕಾರ ಸಂಘಗಳು	ಸಮಾಪನೆಗೊಂಡ ಸಹಕಾರ ಸಂಘಗಳು
23	ಹಾವೇರಿ	7	–
24	ಉತ್ತರ ಕನ್ನಡ	43	31
25	ಬಳ್ಳಾರಿ	211	60
26	ಬೀದರ್	133	89
27	ಗುಲ್ಬರ್ಗಾ	307	97
28	ಯಾದಗಿರಿ	96	48
29	ಕೊಪ್ಪಳ	79	57
30	ರಾಯಚೂರು	159	40
	ಒಟ್ಟು	**2817**	**1519**

ಹುಲ್ಲು ಕತ್ತರಿಸುವ ಯಂತ್ರ (ವೀಡ್ ಕಟ್ಟರ್) ವಿವರ

296 (297) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09, 2009–10 ಮತ್ತು 2010–11ರ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮಂದಿಗೆ ವೀಡ್ಕಟ್ಟರ್ (ಹುಲ್ಲು ಕತ್ತರಿಸುವ ಯಂತ್ರ)ನ್ನು ನೀಡಲಾಗಿದೆ ;

ಆ) ಇದಕ್ಕಾಗಿ ಒದಗಿಸಿದ ಅನುದಾನ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)